ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಡಿ ಎಸ್ ಇ ಆರ್ ಟಿ
DSERT
DEPARTMENT OF STATE EDUCATIONAL RESEARCH AND TRAINING
NO 4. 100 FT RING ROAD. BANASHANKARI 3RD STAGE BENGALURU - 085
Email: dsert.kar@nic.in Website : http://dsert.kar.nic.in
Phone : 080
26422372
26422373
26422374
Fax:26422377

ಸಂಖ್ಯೆ: DPI. DSERT/ETC-1ಹೈ.ಕ.ಅ.ಯೋ–ಕೊ.ಪೂ.ಸಿ–1/2019-20. ದಿನಾಂಕ : 09–08–2019.

**ಸುತ್ತೋಲೆ**

ವಿಷಯ : HKDB ಯೋಜನೆಯಡಿ 718 ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕೊಠಡಿಪೂರ್ವ ಸಿದ್ಧತೆಯನ್ನು ನಿಗಧಿತ ಅವಧಿಯೊಳಗೆ ಕೈಗೊಳ್ಳಲು ನೋಡಲ್ ಅಧಿಕಾರಿಗಳನ್ನು ನೇಮಿಸುವ ಬಗ್ಗೆ ಹಾಗೂ ಪ್ರಗತಿಯ ವರದಿಯನ್ನು ಗೂಗಲ್ ನಮೂನೆಯಲ್ಲಿ ಆನ್‌ಲೈನ್ ಮೂಲಕ ಅಪ್‌ಡೇಟ್ ಮಾಡುವ ಬಗ್ಗೆ

ಉಲ್ಲೇಖ : 1) ಈ ಕಛೇರಿಯ ಸುತ್ತೋಲೆ ಸಮಸಂಖ್ಯೆ ದಿನಾಂಕ: 28/06/2019.
2) ದಿನಾಂಕ: 03–08–2019 ರಂದು ನಡೆದ ದೂರಸಂಪರ್ಕ ತರಬೇತಿ *

* * * *

ಹೈದರಾಬಾದ್ ಕರ್ನಾಟಕ ಪ್ರದೇಶದ 06 ಜಿಲ್ಲೆಗಳ 718 ಪ್ರೌಢಶಾಲೆಗಳಿಗೆ ಆಲ್ ಇನ್ ಒನ್ ಕಂಪ್ಯೂಟರ್ಸ್, ಲ್ಯಾಪ್‌ಟಾಪ್, ಎಲ್.ಸಿ.ಡಿ ಪ್ರೊಜೆಕ್ಟರ್‌ಗಳನ್ನು ಖರೀದಿಸಿ ಪೂರೈಸುವ ಸಲುವಾಗಿ ಕಂಪ್ಯೂಟರ್ ಲ್ಯಾಬ್‌ಗಳನ್ನು ಸ್ಥಾಪಿಸಲು ಕೊಠಡಿ ಪೂರ್ವಸಿದ್ಧತೆ ಮಾಡಲು, ಪ್ರತಿ ಶಾಲೆಗೆ ರೂ 1.00 ಲಕ್ಷದಂತೆ ಅನುದಾನದಂತೆ 718 ಶಾಲೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಸಂಬಂಧ, ಉಲ್ಲೇಖ–1 ರಂತೆ ಕೊಠಡಿ ಸಿದ್ಧತೆ ಕೈಗೊಳ್ಳುವ ವಿಧಾನಗಳ ಕುರಿತು ಸುತ್ತೋಲೆಯನ್ನು ಹೊರಡಿಸಲಾಗಿದೆ. ಇದರ ಭಾಗವಾಗಿ ಸಂಬಂಧಿಸಿದ ಡಯಟ್ ಪ್ರಾಂಶುಪಾಲರು, ಬಿ.ಇ.ಓ., ಬಿ.ಆರ್.ಸಿ.ಗಳು ಹಾಗೂ ಶಾಲೆಗಳ ಮುಖ್ಯ ಶಿಕ್ಷಕರಿಗೆ ಉಲ್ಲೇಖ–2 ರಂತೆ ದೂರಸಂಪರ್ಕ ತರಬೇತಿ ನೀಡಲಾಗಿದೆ.

ಕೊಠಡಿ ಪೂರ್ವ ಸಿದ್ಧತೆಯನ್ನು ಇನ್ನೊಂದು ತಿಂಗಳೊಳಗಾಗಿ ಪೂರ್ಣಗೊಳಿಸಬೇಕಾಗಿದ್ದು, ಈ ಸಂಬಂಧ ಶಾಲೆಗಳಿಗೆ ಮಾರ್ಗದರ್ಶನ ಮಾಡಿ, ಅಗತ್ಯ ಅನುಸರಣೆ ಮಾಡಿ ವರದಿ ಮಾಡಲು ಈ ಕೆಳಗಿನಂತೆ ನೋಡಲ್ ಅಧಿಕಾರಿಗಳನ್ನು ನೇಮಿಸಿದೆ.

1) ಡಯಟ್ ಪ್ರಾಂಶುಪಾಲರು: ಸಂಪೂರ್ಣ ಜವಾಬ್ದಾರಿ
2) ಡಯಟ್ ಹಿರಿಯ/ಕಿರಿಯ ಉಪನ್ಯಾಸಕರು: ಜಿಲ್ಲಾ ನೋಡಲ್ ಅಧಿಕಾರಿ
3) ಡಯಟ್‌ನ ತಾಲೂಕು ನೋಡಲ್ ಅಧಿಕಾರಿ: ಸಂಬಂಧಿಸಿದ ಬ್ಲಾಕ್‌ನಲ್ಲಿನ ಎಲ್ಲಾ ಶಾಲೆಗಳ ಕೊಠಡಿ ಪೂರ್ವ ಸಿದ್ಧತೆಯ ಮೇಲುಸ್ತುವಾರಿ: ಜಿಲ್ಲಾ ನೋಡಲ್ ಅಧಿಕಾರಿಗಳೊಂದಿಗೆ ಸಮನ್ವಯದೊಂದಿಗೆ
4) ಬಿ.ಇ.ಓ.: ಬ್ಲಾಕ್‌ನ ಎಲ್ಲಾ ಶಾಲೆಗಳ ಕೊಠಡಿ ಪೂರ್ವ ಸಿದ್ಧತೆಯ ಸಂಪೂರ್ಣ ಜವಾಬ್ದಾರಿ.
5) ಬಿ.ಆರ್.ಸಿ.: ತಾಲೂಕು ನೋಡಲ್ ಅಧಿಕಾರಿ

Scanned by CamScanner

ತಾಲೂಕಿನ ಎಲ್ಲಾ ಫಲಾನುಭವಿ ಶಾಲೆಗಳನ್ನು ಮೇಲಿನ ಅಧಿಕಾರಿಗಳು ಪ್ರತಿಯೊಬ್ಬರಿಗೆ ಒಂದು ಶಾಲೆಯಂತೆ ಹಂಚಿಕೊಂಡು ಮೇಲುಸ್ತುವಾರಿ ಮಾಡುವುದು. ಉಳಿದ ಶಾಲೆಗಳನ್ನು ಬ್ಲಾಕ್‌ನ ಬಿ.ಆರ್.ಪಿ., ಇ.ಸಿ.ಓ.ಗಳಿಗೆ ಸಮನಾಗಿ ಹಂಚುವುದು. ಶಾಲೆಗಳನ್ನು ಹಂಚಿಕೆ ಮಾಡುವ ಕಾರ್ಯವನ್ನು ಡಯಟ್ ಪ್ರಾಂಶುಪಾಲರು ಬಿ.ಇ.ಓ. ಹಾಗೂ ಬಿ.ಆರ್.ಸಿ.ಗಳ ಸಭೆಯಲ್ಲಿ ಚರ್ಚಿಸಿ, ಕೈಗೊಳ್ಳುವುದು.

ಕೊಠಡಿ ಪೂರ್ವ ಸಿದ್ಧತೆಯು ಸಂಪೂರ್ಣಗೊಳ್ಳುವವರೆಗೆ ಮೇಲಿನ ಅಧಿಕಾರಿಗಳು ಶಾಲಾ ಭೇಟಿ, ದೂರವಾಣಿ ಕರೆ, ಇ-ಮೇಲ್ ಮೂಲಕ ಮಾಹಿತಿ ಸಂಗ್ರಹಿಸಿಕೊಂಡು, ಈ ಕೆಳಗಿನ ಹಂತಗಳಿಗೆ ಸಂಬಂಧಿಸಿದಂತೆ ಆದ ಪ್ರಗತಿಯನ್ನು ಗೂಗಲ್ ನಮೂನೆಯಲ್ಲಿ ವಾರಕ್ಕೊಮ್ಮೆ ಪ್ರತಿ ಶನಿವಾರ ಶಾಲಾವಾರು ಪ್ರಗತಿಯನ್ನು ಬಿ.ಆರ್.ಸಿ.ಗಳು ಆನ್‌ಲೈನ್ ಮೂಲಕ ಅಪ್‌ಡೇಟ್ ಮಾಡುವುದು.

1) ಕೊಠಡಿ ಆಯ್ಕೆ ಮಾಡಿರುವ ಬಗ್ಗೆ
2) ಕೊಠಡಿ ಪೂರ್ವ ಸಿದ್ಧತೆಗೆ ಸಮಿತಿ ರಚನೆ ಮಾಡಿರುವ ಬಗ್ಗೆ
3) ವಿದ್ಯುದೀಕರಣ (ಎಲೆಕ್ಟ್ರಿಕಲ್ ವೈರಿಂಗ್) ಮಾಡಿರುವ ಬಗ್ಗೆ
4) ಎಲೆಕ್ಟ್ರಿಕಲ್ ಅರ್ಥಿಂಗ್ ಮಾಡಿರುವ ಬಗ್ಗೆ
5) ಕೊಠಡಿಗೆ ಕಬ್ಬಿಣದ ಬಾಗಿಲು ಹಾಗೂ ಕಿಟಕಿಗಳಿಗೆ ಮೇಷ್ ಹಾಕಿಸಿರುವ ಬಗ್ಗೆ
6) ಕಂಪ್ಯೂಟರ್ ಚೇರ್ ಮತ್ತು ಟೇಬಲ್‌ಗಳನ್ನು ಖರೀದಿಸಿರುವ ಬಗ್ಗೆ
7) ಎಲ್.ಇ.ಡಿ. ಬಲ್ಬ್, ಸೀಲಿಂಗ್ ಫ್ಯಾನ್, ಎಕ್ಸಾಸ್ಟ್ ಫ್ಯಾನ್ ಖರೀದಿಸಿ, ಅಳವಡಿಸಿರುವ ಬಗ್ಗೆ
8) ಕೊಠಡಿ ಸಿದ್ಧತೆ ಪೂರ್ಣಗೊಂಡಿರುವ ಬಗ್ಗೆ

ಗೂಗಲ್ ನಮೂನೆಯ ಲಿಂಕ್ ಅನ್ನು ಸಧ್ಯದಲ್ಲಿ ತಿಳಿಸಲಾಗುವುದು. ಕೊಠಡಿ ಪೂರ್ವ ಸಿದ್ಧತೆ ಪೂರ್ಣಗೊಂಡ ನಂತರ ಪ್ರತಿ ಶಾಲೆಯ ಎರಡು ಫೋಟೋಗಳನ್ನು ಹಂಚಿಕೊಳ್ಳಲು ಸೂಚಿಸಿದೆ.

ಶಾಲೆಯಲ್ಲಿ ಎಸ್.ಡಿ.ಎಂ.ಸಿ. ರಚನೆಯಾಗದೇ ಇದ್ದಲ್ಲಿ ಮುಖ್ಯ ಶಿಕ್ಷಕರೇ ಇತರ ಶಿಕ್ಷಕರ ಸಹಕಾರದೊಂದಿಗೆ ಸಮಿತಿ ಮಾಡಿಕೊಂಡು, ಕೊಠಡಿ ಪೂರ್ವ ಸಿದ್ಧತೆ ಕೈಗೊಳ್ಳುವುದು. ಕೊಠಡಿ ಲಭ್ಯತೆ ಇಲ್ಲ, ವಿದ್ಯುಚ್ಛಕ್ತಿ ಇಲ್ಲವೆಂಬ ಕಾರಣಗಳನ್ನು ತಿಳಿಸದೇ ಎಲ್ಲಾ ಶಾಲೆಗಳಲ್ಲಿ ಕೊಠಡಿ ಪೂರ್ವ ಸಿದ್ಧತೆ ಪೂರ್ಣಗೊಳಿಸುವ ಹೊಣೆ ಸಂಬಂಧಿಸಿದ ಬಿ.ಇ.ಓ ಹಾಗೂ ಬಿ.ಆರ್.ಸಿ.ರವರದ್ದಾಗಿರುತ್ತದೆ. ಈ ಕಾರ್ಯದಲ್ಲಿ ಅಗತ್ಯ ಅನುಸರಣೆ ಹಾಗೂ ಮೇಲ್ವಿಚಾರಣೆಯನ್ನು ಉಪನಿರ್ದೇಶಕರು (ಆಡಳಿತ)ರವರು ಆದ್ಯತೆ ಮೇರೆಗೆ ಮಾಡಲು ತಿಳಿಸಿದೆ.

13/4/4

ನಿರ್ದೇಶಕರು,
ಡಿ.ಎಸ್.ಇ.ಆರ್.ಟಿ
ಬೆಂಗಳೂರು

Scanned by CamScanner

ಇವರಿಗೆ : ಅಗತ್ಯ ಕ್ರಮಕ್ಕಾಗಿ.

1) ಡಯಟ್ ಪ್ರಾಂಶುಪಾಲರು, ಬಳ್ಳಾರಿ, ಕೊಪ್ಪಳ, ರಾಯಚೂರು, ಬೀದರ್, ಕಲಬುರ್ಗಿ, ಯಾದಗಿರಿರವರಿಗೆ – ಅಗತ್ಯ ಕ್ರಮಕ್ಕಾಗಿ.
2) ಉಪನಿರ್ದೇಶಕರು (ಆಡಳಿತ), ಬಳ್ಳಾರಿ, ಕೊಪ್ಪಳ, ರಾಯಚೂರು, ಬೀದರ್, ಕಲಬುರ್ಗಿ, ಯಾದಗಿರಿರವರಿಗೆ – ಡಯಟ್ ಪ್ರಾಂಶುಪಾಲರ ಮೂಲಕ–ಅಗತ್ಯ ಕ್ರಮಕ್ಕಾಗಿ
3) ಸಂಬಂಧಿಸಿದ ಬ್ಲಾಕ್‌ಗಳ ಬಿ.ಇ.ಓ.ಗಳಿಗೆ–ಡಯಟ್ ಪ್ರಾಂಶುಪಾಲರ ಮೂಲಕ–ಅಗತ್ಯ ಕ್ರಮಕ್ಕಾಗಿ
4) ಸಂಬಂಧಿಸಿದ ಬ್ಲಾಕ್‌ಗಳ ಬಿ.ಆರ್.ಸಿ.ಗಳಿಗೆ–ಬಿ.ಇ.ಓ.ಗಳ ಮೂಲಕ–ಅಗತ್ಯ ಕ್ರಮಕ್ಕಾಗಿ
5) ಸಂಬಂಧಿಸಿದ ಶಾಲೆಗಳ ಮುಖ್ಯ ಶಿಕ್ಷಕರಿಗೆ–ಬಿ.ಇ.ಓ.ಗಳ ಮೂಲಕ–ಅಗತ್ಯ ಕ್ರಮಕ್ಕಾಗಿ

ಪ್ರತಿಗಳು : ಮಾಹಿತಿಗಾಗಿ :

1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ
2) ಮಾನ್ಯ ಆಯುಕ್ತರು, ಸಾ.ಶಿ.ಇ, ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3) ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4) ಮಾನ್ಯ ಅಪರ ಆಯುಕ್ತರು, ಸಾ.ಶಿ.ಇ, ಗುಲ್ಬರ್ಗಾ ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಅನುಪಾಲನೆಗಾಗಿ ಕೋರಿ ಕಳುಹಿಸಿದೆ.
5) ಕಛೇರಿ ಪ್ರತಿ.

Scanned by CamScanner